ಆ ಅಭ್ಯರ್ಥಿಗಳು ದಯವಿಟ್ಟು ಲೋಕಾಯುಕ್ತಕ್ಕೆ ಒಂದು ಅರ್ಜಿಯನ್ನು ಹಾಕಬೇಕೆಂದು ಈ ಸದನದ ಮುಂಖಾಂತರವಾಗಿ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೆ, ೧೫ನೇ ಅಲ್ಪಕಾಲಾವಧಿ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಬಿ ರಾಚಯ್ಯ.— ಸಾರ್, ಇದರಲ್ಲಿ...

ಅಧ್ಯಕ್ಷರು.— ನಾಳೆ ಬೇಕಾದರೆ ಹೇಳಿ. ನಾಳೆ ಇಡುತ್ತೇನೆ.

ಶ್ರೀ ಬಿ. ರಾಚಯ್ಯ.— ನಾಳೆ ಹೇಳುತ್ತೇನೆ.

ಅಧ್ಯಕ್ಷರು.— ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಆರ್. ವೆಂಕಟರಾವಯ್ಯ.— ನಾನು ಒಂದು ನಿವಿಷ ಲೇಟಾಗಿ ಬಂದೆ.

ಅಧ್ಯಕ್ಷರು.— ನಾನು ಮೊದಲು ಕರೆದಾಗ ತಾವು ಅಬ್‌ಸೆಂಟ್ ಇದ್ದಿರಿ. ಪದ್ಧತಿ ಏನು ಎಂಬುದನ್ನು ಕೇಳಿ, ತಾವು ವಕೀಲರಿದ್ದೀರಿ. ಕಾಯಿದೆ ಹೇಳಿಕೊಡಬೇಕಾಗಿಲ್ಲ. ನಾನು ಹೇಳುವುದು ಕೇಳಿ. ಕ್ವಶ್ಚನ್ ಅವರ್ ೧೨ಕ್ಕೆ ಮೊದಲೇ ಮುಂಗಿದ್ದರೆ ಅಬ್ಸೆಂಟ್ ಆದವರನ್ನು ಮತ್ತೆ ಕರೆಯುವ ಪರಿಪಾಠ ಇದೆ ಈಗ ಕ್ವಶ್ಚನ್ ಅವರ್ ಮುಗಿದಿದೆ. ಮತ್ತೆ ಕರೆಯುವುದಕ್ಕೆ ಬರುವುದಿಲ್ಲ. ಕುಳಿತುಕೊಳ್ಳಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿಗಳು

ಜಮಖಂಡಿಯಲ್ಲಿ ಸಾರ್ವಜನಿಕ ಆಸ್ಪತ್ರೆಗೆ ಆಂಬ್ಯುಲೆನ್ಸ್ ಮತ್ತು ಜನರೇಟರ್‌ಗಳ ಪೂರೈಕೆ

೧೫೧. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).— ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ನಗರದಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ ಮತ್ತು ಮುಧೋಳ್ ಮಹಾಲಿಂಗಪುರ, ಬನಹಟ್ಟಿ, ತೇರದಾಳ್, ಸವಳಗಿ ಹೀಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸರ್ಕಾರಿ ಆಸ್ಪತ್ರೆಗಳಿರುವುದರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಎಲ್ಲ ಆಸ್ಪತ್ರೆಗಳಿಗೆ ಮತ್ತು ಗ್ರಾಮಾಂತರ ಪ್ರದೇಶಗಳ ರೋಗಿಗಳ ಅನುಕೂಲಕ್ಕಾಗಿ ಜಮಖಂಡಿ ಸಾರ್ವಜನಿಕ ಆಸ್ಪತ್ರೆಗೆ ಒಂದು ಸುಸಜ್ಜಿತ ಆಂಬ್ಯುಲೆನ್ಸ್ ಮತ್ತು ಒಂದು ಜನರೇಟರ್‌ಗಳ ಪೂರೈಕೆಯ ಕುರಿತು ಸರ್ಕಾರದವರು ಆಲೋಚನೆ ಮಾಡಿರುವರೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು).—

ಅ) ಬಂದಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ಒಂದು ಆಂಬ್ಯುಲೆನ್ಸ್ ವಾಹನವನ್ನು ಮತ್ತು ಒಂದು ಜನರೇಟರನ್ನು ಒದಗಿಸಲು ಪ್ರಯತ್ನ ಮಾಡಲಾಗುವುದು.

ಮೈಸೂರಿನಲ್ಲಿರುವ ಅತಿಥಿಗಳ ವಸತಿ ಗೃಹಕ್ಕಾಗಿ ಸರಕಾರದವರು ಮಾಡಿದ ವೆಚ್ಚ ವೆಷ್ಟು

೧೫೫. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ),— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಮೈಸೂರು ನಗರದಲ್ಲಿ ಕಟ್ಟಿಸಿರುವ ಅತಿಥಿಗೃಹಗಳಿಗಾಗಿ ಸರ್ಕಾರದವರು ವೆಚ್ಚಮಾಡಿದ ಹಣವೆಷ್ಟು ?

ಆ) ಈ ವಸತಿ ಗೃಹಗಳು ಈಗ ಸರ್ಕಾರದ ಯಾವ ಇಲಾಖೆಯ ಹತ್ತೋಟಿಯಲ್ಲಿದೆ ?